## ರಾಮಕೃಷ್ಣ ಮಿಷನ್ನಿನ ೨೦೦೩-೨೦೦೪ನೇ ಸಾಲಿನ ಆಡಳಿತ ಸಂಸ್ಥೆಯ ವರದಿ

**ರಾ**ಮಕೃಷ್ಣ ಮಿಷನ್ನಿನ ೯೪ನೇ ವಾರ್ಷಿಕ ಸಭೆಯು ೨೦೦೪ರ ೨೧ನೇ ಡಿಸೆಂಬರ್ ಭಾನುವಾರ ಮಧ್ಯಾಹ್ನ ೩.೩೦ ಗಂಟೆಗೆ ಮಿಷನ್ನಿನ ಪ್ರಧಾನ ಕೇಂದ್ರವಾದ ಬೇಲೂರು ಮಠದಲ್ಲಿ ನಡೆಯಿತು.

ಈ ವರ್ಷದಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳಲ್ಲಿ, ಬಾಂಗ್ಲಾ ದೇಶದ ಚಿತ್ತಗಾಂಗ್‌ನಲ್ಲಿ ರಾಮಕೃಷ್ಣ ಸಂಘದ ಹೊಸ ಕೇಂದ್ರವನ್ನು ತೆರೆದದ್ದು ಮತ್ತು ಬೃಂದಾವನ ಸೇವಾಶ್ರಮದಲ್ಲಿ ಹೆರಿಗೆ ವಿಭಾಗ ಹಾಗೂ ದಂತಚಿಕಿತ್ಸಾ ಘಟಕ, ಕಂಖಲ್ ಸೇವಾಶ್ರಮದಲ್ಲಿ ಇಂಟೆನ್ಸಿವ್ ಕೇರ್ ಯೂನಿಟ್, ಲಕ್ನೋದ ವಿವೇಕಾನಂದ ಪಾಲಿಕ್ಲಿನಿಕ್‌ನಲ್ಲಿ ಶಿಶುಚಿಕಿತ್ಸಾ ಘಟಕ ಮತ್ತು ಜಮ್ಮುಕೇಂದ್ರದಲ್ಲಿ ಒಂದು ಸಂಚಾರಿ ಘಟಕ—ಇವುಗಳ ಉದ್ಘಾಟನೆ ಬಹು ಪ್ರಮುಖವಾದುವುಗಳಾಗಿವೆ. ಕೊಲ್ಕತಾದಲ್ಲಿನ ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನ ಆಸ್ಪತ್ರೆಯ ಆವರಣದೊಳಗೇ ವಾಸಹೂಡಿದ್ದ ಕೊಳಗೇರಿ ನಿವಾಸಿಗಳಿಗೆ ೭೮ ಫ್ಲ್ಯಾಟ್‌ಗಳ ಗೃಹಸಂಕೀರ್ಣವೊಂದನ್ನು ಕೊಲ್ಕತಾದ ಬಾಗ್ಮರಿಯಲ್ಲಿ ನಿರ್ಮಿಸಿ, ಅವರಿಗೇ ನೀಡಲಾಯಿತು.

ರಾಮಕೃಷ್ಣ ಮಠದ ವತಿಯಿಂದ, ಪುಣೆ ಕೇಂದ್ರದಲ್ಲಿ ಒಂದು ಪಾಲಿಕ್ಲಿನಿಕ್‌ನ ಉದ್ಘಾಟನೆ ಮಾಡಲಾಯಿತು ಹಾಗೂ ಕೊಲ್ಕತಾದ ಬಲರಾಂ ಮಂದಿರ್ ಟ್ರಸ್ಟ್ ಮತ್ತು ಶಿಕ್ರಾಕುಲಿಂ ಗ್ರಾಮದ ಸ್ವಾಮಿ ಬ್ರಹ್ಮಾನಂದ ಟ್ರಸ್ಟ್ ಇವುಗಳು ರಾಮಕೃಷ್ಣಮಠದಲ್ಲಿ ವಿಲೀನಗೊಂಡದ್ದು ವಿಶೇಷವಾಗಿ ಉಲ್ಲೇಖಯೋಗ್ಯವಾಗಿವೆ.

ಈ ವರ್ಷದಲ್ಲಿ ದೇಶದ ಹಲವಾರು ಭಾಗಗಳಲ್ಲಿ ೭.೮೧ ಕೋಟಿ ರೂಗಳ ವೆಚ್ಚದಲ್ಲಿ ವ್ಯಾಪಕವಾದ ಪರಿಹಾರ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಮಿಷನ್ ಕೈಗೊಂಡಿತ್ತು. ಆಸುಪಾಸಿನ ೧,೭೪೫ ಗ್ರಾಮಗಳಲ್ಲಿನ ಸುಮಾರು ೩.೯೮ ಲಕ್ಷ ಜನರು ಈ ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆದಿದ್ದಾರೆ. ಜನವರಿ ೨೦೦೧ರಲ್ಲಿ ಗುಜರಾತ್‌ನ ಅತ್ಯಂತ ಭೀಕರವಾದ ಭೂಕಂಪದಿಂದ ತತ್ತರಿಸಿದವರಿಗಾಗಿ ಕೈಗೊಂಡ ಬೃಹತ್ ಪ್ರಮಾಣದ ಪುನರ್ವಸತಿ ಕಾರ್ಯಕ್ರಮವು ಮಾರ್ಚ್ ೨೦೦೪ರಲ್ಲಿ ಮುಕ್ತಾಯವಾಯಿತು. ಈ ಯೋಜನೆಯಡಿ ಜನತೆಗೆ ಒದಗಿಸಿದ ಪರಿಹಾರ ಕಾರ್ಯದ ವಿವರ ಹೀಗಿದೆ : (i) ೩೯೦ ಮನೆಗಳು, ೮೧ ಶಾಲಾ ಕಟ್ಟಡಗಳು, ೫ ಸಮುದಾಯ ಭವನಗಳು—ಇವುಗಳ ನಿರ್ಮಾಣ, (ii) ಸ್ವಂತ ಗೃಹನಿರ್ಮಾಣ ಯೋಜನೆಯಡಿ ೧೯೦ ಕುಟುಂಬಗಳಿಗೆ ಕಟ್ಟಡ ನಿರ್ಮಾಣದ ದ್ರವ್ಯಗಳನ್ನು ಒದಗಿಸಿದ್ದು ಹಾಗೂ (iii) ಜಲಶೇಖರಣೆಗಾಗಿ ೭ ಕೊಳಗಳನ್ನು ತೋಡಿಸಿರುವುದು ಮುಂತಾದುವು. ಗುಜರಾತ್ ಭೂಕಂಪ ಪರಿಹಾರ ಮತ್ತು ಪುನರ್ವಸತಿ ಯೋಜನೆಯಡಿ ಸುಮಾರು ೨೦ ಕೋಟಿ ರೂಗಳು ಒಟ್ಟು ವೆಚ್ಚವಾಗಿದೆ.

ಜನತೆಯ ಕಲ್ಯಾಣ ಕಾರ್ಯಕ್ರಮಗಳಡಿ ಸುಮಾರು ೨.೬೭ ಕೋಟಿ ರೂಗಳನ್ನು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ-ವೇತನ (scholar ship); ವೃದ್ಧರು, ರೋಗಿಗಳು ಮತ್ತು ಅನಾಥರಿಗೆ ಧನಸಹಾಯ ಮುಂತಾದವುಗಳಿಗೆ ಖರ್ಚುಮಾಡಲಾಯಿತು.

೯ ಆಸ್ಪತ್ರೆಗಳು, ೧೧೧ ಔಷಧಾಲಯಗಳು ಮತ್ತು ಸಂಚಾರಿ ಔಷಧ ವಿತರಣೆ ಕೇಂದ್ರಗಳ ಮೂಲಕ ೬೨ ಲಕ್ಷಕ್ಕೂ ಹೆಚ್ಚು ಜನರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಯಿತು. ಇದಕ್ಕೆ ತಗಲಿದ ಒಟ್ಟು ಖರ್ಚು ರೂ. ೩೧.೩೬ ಕೋಟಿ.

ಬಾಲವಿಹಾರದಿಂದ ಹಿಡಿದು ಸ್ನಾತಕೋತ್ತರದವರೆಗೆ ೧.೮೦ ಲಕ್ಷ ವಿದ್ಯಾರ್ಥಿಗಳು ನಮ್ಮ ಶಿಕ್ಷಣಸಂಸ್ಥೆಗಳ ಪ್ರಯೋಜನವನ್ನು ಪಡೆದಿರುವರು. ಇವರಲ್ಲಿ ೬೬ ಸಾವಿರಕ್ಕೂ ಹೆಚ್ಚಿನವರು ವಿದ್ಯಾರ್ಥಿನಿಯರು. ರೂ. ೮೦.೩೬ ಕೋಟಿಯನ್ನು ಶಿಕ್ಷಣಕಾರ್ಯದಲ್ಲಿ ವಿನಿಯೋಗಿಸಲಾಯಿತು. ಗ್ರಾಮೀಣ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಒಟ್ಟು ಹಣ ರೂ.೯.೮೭ ಕೋಟಿ.

ಈ ಎಲ್ಲ ಯೋಜನೆಗಳಲ್ಲಿ ನಮಗೆ ಅನೇಕ ರೀತಿಯ ಸಹಾಯ ಮಾಡಿದ ನಮ್ಮ ಸದಸ್ಯರು ಮತ್ತು ಸ್ನೇಹಿತಭಕ್ತರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ ಮತ್ತು ಅವರ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

*ಸ್ವಾಮಿ ಸ್ಮರಣಾನಂದ*
(ಪ್ರಧಾನ ಕಾರ್ಯದರ್ಶಿಗಳು)

## ನಾಲ್ಕನೆ ಅಖಿಲ ಕರ್ನಾಟಕ ರಾಮಕೃಷ್ಣ ಭಕ್ತ ಸಮ್ಮೇಳನ

ಈ ಸಮ್ಮೇಳನವು ಗದಗದಲ್ಲಿರುವ ರಾಮಕೃಷ್ಣ ವಿವೇಕಾನಂದ ಆಶ್ರಮದ ವತಿಯಿಂದ ಡಿಸೆಂಬರ್ ೨೦,೨೧,೨೨ ಮತ್ತು ೨೩ರಂದು ಜರುಗಿತು. ಸುಮಾರು ೩,೦೦೦ ಭಕ್ತಪ್ರತಿನಿಧಿಗಳು ನಾಡಿನ ಎಲ್ಲ ಭಾಗಗಳಿಂದ ಬಂದಿದ್ದರು. ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಪರಮಪೂಜ್ಯ ಸ್ವಾಮಿ ಗೌತಮಾನಂದಜಿಯವರು ಸಮ್ಮೇಳನವನ್ನು ಉದ್ಘಾಟಿಸಿದರು. ನಂತರ ಮೂರು ದಿನಗಳ ಕಾಲ ದಿವ್ಯತ್ರಯರ ಮೇಲೆ ಆಹ್ವಾನಿತ ವಿವಿಧ ಸ್ವಾಮಿಗಳಿಂದಲೂ ವಿದ್ವನ್ಮಣಿಗಳಿಂದಲೂ ಬುದ್ಧಿಗೆ ಆಹಾರವನ್ನು ನೀಡುವ ಹೃದಯಕ್ಕೆ ತಂಪನ್ನು ನೀಡುವ ಮತ್ತು ಕಾರ್ಯಕ್ಕೆ ಸ್ಫೂರ್ತಿಯನ್ನು ನೀಡುವ ಉದ್ಬೋಧಕ ಉಪನ್ಯಾಸಗಳು ಇದ್ದವು. ಭದ್ರಗಿರಿ ಅಚ್ಯುತದಾಸರ ಹರಿಕಥೆಯೂ ಸೇರಿದಂತೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತರ ಮನಸೆಳೆದವು. ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯಪಾಲರಾದ ಮಾನ್ಯ ಟಿ.ಎನ್. ಚತುರ್ವೇದಿಯವರೂ ಕೃಷಿ ಮಂತ್ರಿಗಳಾದ ಮಾನ್ಯ ಹೆಚ್.ಕೆ. ಪಾಟೀಲ್ ಅವರೂ ಮತ್ತು ಗದಗಿನ ಜನಪ್ರಿಯ ಶಾಸಕರಾದ ಶ್ರೀ ಡಿ.ಆರ್. ಪಾಟೀಲ್ ಅವರೂ ಪಾಲ್ಗೊಂಡಿದ್ದರು. ಪರಮಪೂಜ್ಯ ಸ್ವಾಮಿ ಗೌತಮಾನಂದಜಿಯವರು ಆಶೀರ್ವಚನ ನೀಡಿದರು. ಸುಮಾರು ೨೫ ಜನ ಸಾಧುಗಳ ಉಪಸ್ಥಿತಿ ಸಮ್ಮೇಳನಕ್ಕೆ ವಿಶೇಷ ಶೋಭೆಯನ್ನು ತಂದಿತ್ತು. ಸಮ್ಮೇಳನದ ಯಶಸ್ಸು ನೆರೆದ ಭಕ್ತಾದಿಗಳು ವ್ಯಕ್ತಪಡಿಸಿದ ಪೂರ್ಣ ಸಂತೃಪ್ತಿಯಲ್ಲಿ ಎದ್ದು ಕಾಣುತ್ತಿತ್ತು.

◆